ಗುರುಪ್ರಸಾದ್ ಕಂಟಲಗೆರೆ
ಕಲೆ: ಸಂತೋಷ್ ಸಸಿಹಿತ್ಲು

# ಬೆಂಕಿಪುರ ಕಾಲೋನಿ

ಶ್ರೀಗಳ ಮುಖದಲ್ಲಿ ಇಂದು ಪ್ರಶಾಂತ ಕಳೆ ಎದ್ದು ಕಾಣುತ್ತಿತ್ತು. ಮುಂಜಾನೆಯೇ ಎದ್ದು ತಮ್ಮ ನಿತ್ಯ ಕಾಯಕಗಳನ್ನು ಮುಗಿಸಿ ಬರಬೇಕಿದ್ದ ನಿಗದಿತ ಭಕ್ತನಿಗಾಗಿ ಕಾಯುತ್ತಿದ್ದರು. ಅವರು ಇಂದು ತಮ್ಮ ಇಚ್ಛೆಯಂತೆ ಬಹಳ ಪ್ರಮುಖವಾದ ಕಾಯಕವೊಂದನ್ನು ಈಡೇರಿಸುವ ನಿಟ್ಟಿನಲ್ಲಿ ಮುಂದಡಿ ಇಟ್ಟಿದ್ದರು. ನಿನ್ನೆ ರಾತ್ರಿಯಷ್ಟೆ ತಮ್ಮ ಮಠದ ಭಕ್ತರೂ ಆಗಿರುವ ಸದರಿ ತೋಟಗಾರಿಕೆ ಮಂತ್ರಿಗಳ ಕರೆ ಬಂದಿತ್ತು. ಇದೊಂದು ಕೆಲಸ ಮಾಡಿಕೊಟ್ಟರೆ ಯಾವುದೋ ಅಚಾನಕ್ ಮಾತಿನಿಂದ ಎರಡು ಜಾತಿಗಳ ಮಧ್ಯೆ ಉಂಟಾಗಿರುವ ಪ್ರಕ್ಷುಬ್ಧತೆ ಕಡಿಮೆಯಾಗಿ ಸಾಮರಸ್ಯ ಬೆಳೆಯುತ್ತದೆಂಬ ವಿಶ್ವಾಸ ಮಂತ್ರಿಗಳದ್ದಾಗಿತ್ತು. ತಮ್ಮ ಕ್ಷೇತ್ರದಲ್ಲಿ ನಿರ್ಣಾಯಕವಾಗಿರುವ ಈ ಸಮುದಾಯದ ನಡುವೆ ಉಂಟಾಗಿರುವ ಈ ಭಿನ್ನಾಭಿಪ್ರಾಯ ದೂರಾದರೆ ಖಂಡಿತ ಮುಂದಿನ ಚುನಾವಣೆಯಲ್ಲೂ ಪಕ್ಷದ ಟಿಕೆಟ್ ನನ್ನದೇ ಎಂಬ ವಿಶ್ವಾಸ ಈಗಾಗಲೇ ವರ್ಚಸ್ಸಿಗೆ ಕುಂದುಂಟು ಮಾಡಿಕೊಂಡಿರುವ ಹಾಲಿ ಮಂತ್ರಿಗಳದ್ದಾಗಿತ್ತು. ಅದಕ್ಕಾಗಿ ಶ್ರೀಗಳಿಗೆ ಫೋನಾಯಿಸಿ ವಾರದಿಂದಲೂ ಹಿಂಬಾಲಿಸಿದ್ದರು.

ಮಂತ್ರಿಗಳ ಕೆಲಸ ನಿರ್ವಹಿಸುವ ಮೂಲಕ ಸರ್ಕಾರದ ಗಮನ ನಮ್ಮ ಮಠದ ಕಡೆಗೆ ಬೀಳುವಂತಾದರೆ ಮುಂದಿನ ಬಜೆಟ್‌ನಲ್ಲಿ ನಮ್ಮ ಮಠದ ಪಾಲು ಕಳೆದ ಬಾರಿಗಿಂತ ತುಸು ಹೆಚ್ಚಾಗುವುದರಲ್ಲಿ ಯಾವುದೇ ಅನುಮಾನವಿಲ್ಲ ಎಂಬುದು ಶ್ರೀಗಳ ಎಣಿಕೆಯಾಗಿತ್ತು. ಈ ಎಲ್ಲಾ ಸುಖಗಳನ್ನು ನೆನೆದ ಶ್ರೀಗಳು ಇನ್ನಷ್ಟು ಉತ್ಸುಕರಾಗುವರು. ಮುಖದಲ್ಲಿ ಮಂದಹಾಸ ತುಂಬಿಕೊಂಡೇ ತಿರುಗಾಡುವರು. ಆಗಿಂದಾಗ್ಗೆ ಕೈಗಡಿಯಾರದ ಮುಳ್ಳನ್ನೇ ಪರೀಕ್ಷಿಸುತ್ತ ಸಮಯ ಅದಾಗಲೇ ಎಂಟರ ಬಳಿ ಸಮೀಪಿಸುತ್ತಿರುವುದನ್ನ ಖಾತ್ರಿಪಡಿಸಿಕೊಳ್ಳುವರು.

ಇತ್ತ ಶ್ರೀಗಳ ಆಗಮನಕ್ಕಾಗಿ ಸಿದ್ಧಗೊಂಡಿರುವ ಬೆಂಕಿಪುರ ಗ್ರಾಮ ಊರೊಳ್ಳ ಕಡೆಯಿಂದಲೂ ಇತ್ತ ಕಾಲೋನಿ ಕಡೆಯಿಂದಲೂ ಭಕ್ತಿ ಸಮರ್ಪಣಾ ಭಾವದಿ ಮಡಿಯಾಗಿ ನಿಂತಿದೆ. ಊರ ಹೆಬ್ಬಾಗಿಲು ತಳಿರು ತೋರಣಗಳಿಂದ ಸಿಂಗರಿಸಲ್ಪಟ್ಟಿದೆ. ದಿನವೂ ಬುಗ್ಗನೆ ಏಳುತ್ತಿದ್ದ ದೂಳಿಗೆ ರಾತ್ರಿಯೇ ಟ್ಯಾಂಕರ್ ನೀರು ಹೊಡೆಸಿ ತಾತ್ಕಾಲಿಕವಾಗಿ ಮಲಗಿಸಲಾಗಿದೆ. ಹಟ್ಟಿಗರು ಈ ಹಿಂದೆ ತಮ್ಮ ಮನೆಗಳ ಮುಂದೆ ಸಗಣಿ ಬಗುಡ ಹಾಕುತ್ತಿದ್ದ ಜಾಗದಲ್ಲಿ ಈಗ ಸಿಮೆಂಟ್ ರೋಡ್ ಬಂದಿರುವುದರಿಂದ, ಅದನ್ನೇ ಚನ್ನಾಗಿ ತೊಳೆದು ರಂಗೋಲಿ ಬಿಟ್ಟಿದ್ದಾರೆ. ಕೋಳಿಗಳಿರುವ ಮಂಕ್ರಿ ಎತ್ತಿ ಬಿಟ್ಟರೆ ಹಟ್ಟಿ ತುಂಬ ಅವೇ ಓಡಾಡುತ್ತಿರುತ್ತವೆಂಬ ಮುಂದಾಲೋಚನೆಯಿಂದ ಅವುಗಳಿಗೆ ಇನ್ನೂ ಬಿಡುಗಡೆಯ